**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರಡಿ ಕ್ರಮವಹಿಸುವ ಸಂಯೋಜನಾ ಪ್ರಸ್ತಾವನೆಗಳಿಗೆ 2024-25ನೇ ಸಾಲಿನ ಸಂಯೋಜನಾ ಪ್ರಕ್ರಿಯೆಯ ವೇಳಾಪಟ್ಟಿಯ ಕುರಿತು.

***********

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಲಯಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರಡಿ ವಿಶ್ವವಿದ್ಯಾಲಯಗಳು ಮತ್ತು ಸ್ಥಳೀಯ ವಿಚಾರಣಾ ಸಮಿತಿಯು ಕೈಗೊಳ್ಳಬೇಕಾದ ನಿಯಮಗಳನ್ನು ಮತ್ತು ಕ್ರಮಗಳನ್ನು ವಿವರಿಸಲಾಗಿದೆ.

ಅದರನ್ವಯ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರಡಿ Opening New Colleges, Extension of existing affiliation, Continuation of affiliation, Permanent affiliation, Change/Addition of subject, Division of faculty, Increase of intake, Change of name, Change of place, Closure and withdrawal of a college, Local inquiry committee formation and Transfer of management ವಿವಿಧ ರೀತಿಯ ಎಲ್ಲಾ ಸಂಯೋಜನೆ ಪ್ರಸ್ತಾವನೆಗಳನ್ನು ಕಡ್ಡಾಯವಾಗಿ UUCMS ಆನ್‌ಲೈನ್ ತಂತ್ರಾಂಶದ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ವೇಳಾಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಜಾರಿಗೊಳಿಸಲು ತೀರ್ಮಾನಿಸಿ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂ. ಇಡಿ 166 ಯುಎನ್‌ಇ 2023, ಬೆಂಗಳೂರು, ದಿನಾಂಕ:08.05.2024.**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 59ರಡಿ ಕ್ರಮವಹಿಸುವ ಸಂಯೋಜನಾ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನಾ ವೇಳಾಪಟ್ಟಿಯನ್ನು ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಈ ಕೆಳಕಂಡಂತೆ ಕೂಡಲೇ ಕಡ್ಡಾಯವಾಗಿ ಜಾರಿಗೊಳಿಸುವಂತೆ ಆದೇಶಿಸಿದೆ.

**Tentative Date for Affiliation Process through UUCMS Online portal**

| ಕ್ರ. ಸಂ | ವಿವರಗಳು | ಕೊನೆಯ ದಿನಾಂಕ | ಸಮಾನಾಂತರ ಚಟುವಟಿಕೆಗಳು |
|---|---|---|---|
| 1 | ಸರ್ಕಾರದ ಉಪಕಾರ್ಯದರ್ಶಿರವರ ಲಾಗಿನ್‌ನಲ್ಲಿ ದಿನಾಂಕ ನಿಗದೀಕರಿಸಿ UUCMS ಸಂಯೋಜನೆ ಪ್ರಾರಂಭ | 09.05.2024 | |
| 2 | ವಿಶ್ವವಿದ್ಯಾಲಯಗಳಿಂದ UUCMS ನಲ್ಲಿ ಶುಲ್ಕ ನಿಗದೀಕರಣ | 10.05.2024 | |
| 3 | ಕಾಲೇಜುಗಳಿಂದ, 2024-25 ನೇ ಸಾಲಿಗೆ ದತ್ತಾಂಶ ಸೇರ್ಪಡಿಕೆ/ ಇಂದೀಕರಣದೊಂದಿಗೆ ಅರ್ಜಿ ಮತ್ತು ಶುಲ್ಕ ಸಲ್ಲಿಕೆ | 25.05.2024 | ಕಾಲೇಜುಗಳು ಆನ್‌ಲೈನ್ ಅರ್ಜಿ ಸಲ್ಲಿಸುತ್ತಿರುವಂತೆ, LIC ತಂಡಗಳ ರಚನೆ ಮತ್ತು ತಂಡಗಳ ಕಾಲೇಜುಗಳ ಭೇಟಿ, ಮತ್ತು ಸಲ್ಲಿಸಿದ ವರದಿಗಳಿಗೆ |

| | | | |
|---|---|---|---|
| 4 | ವಿಶ್ವವಿದ್ಯಾಲಯಗಳಿಂದ ಸ್ಥಳೀಯ ಪರಿಶೀಲನ ಸಮಿತಿ ತಂಡಗಳ (LIC) ರಚನೆ, ತಂಡಗಳ ಕಾಲೇಜುಗಳ ಭೇಟಿ ಮತ್ತು ಆನ್‌ಲೈನ್‌ನಲ್ಲಿ ಪ್ರಾಥಮಿಕ ವರದಿ ಸಲ್ಲಿಕೆ | 05.06.2024 | ಸ್ಕೋರ್ ಉತ್ಪಾದನೆಗೆ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಂದ ಅನುಮೋದನೆ |
| 5 | ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಂದ LIC ಯ ಪ್ರಾಥಮಿಕ ವರದಿ ಅನುಮೋಧನೆ, ಸ್ಕೋರ್ ಉತ್ಪಾದನೆ ಮತ್ತು ಶಿಫಾರಸ್ಸಿಗಾಗಿ LIC ಗೆ ರವಾನೆ | 07.06.2024 | |
| 6 | ಸ್ಕೋರ್ ಉತ್ಪಾದನೆ ಆಧಾರದಲ್ಲಿ, LIC ಶಿಫಾರಸ್ಸಿನ ಸಲ್ಲಿಕೆ | 10.06.2024 | LIC ಶಿಫಾರಸ್ಸಿನ ಸಲ್ಲಿಸಿರುವ ಕಾಲೇಜುಗಳನ್ನು ವಿವಿಧ ಗುಂಪುಗಳಲ್ಲಿ ಶಾಸನಬದ್ಧ ಪ್ರಾಧೀಕಾರದಿಂದ ಅನುಮೋದನೆ |
| 7 | ಶಾಸನಬದ್ಧ ಪ್ರಾಧೀಕಾರದಿಂದ ಅನುಮೋದನೆ ಮತ್ತು ಸರ್ಕಾರಕ್ಕೆ ಆನ್‌ಲೈನ್ ಮುಖಾಂತರ ಪ್ರಸ್ತಾವನೆ ಸಲ್ಲಿಕೆ. | 15.06.2024 | |
| 8 | ವಿಶ್ವವಿದ್ಯಾಲಯಗಳ ಹಂತದಲ್ಲಿ ಅನುಮೋದಿಸುವ ಕಾಲೇಜುಗಳನ್ನು UUCMSನಲ್ಲಿ ಅನುಮೋದನೆ* | 17.06.2024 | ವಿಶ್ವವಿದ್ಯಾಲಯಗಳ ಹಂತದಲ್ಲಿ ಅನುಮೋದಿಸುವ ಮತ್ತು ಸರ್ಕಾರಕ್ಕೆ ಪ್ರಸ್ತಾವನೆಗಳ ಸಲ್ಲಿಕೆ |
| 9 | ಸರ್ಕಾರಕ್ಕೆ ಪ್ರಸ್ತಾವನೆಗಳ ಸಲ್ಲಿಕೆ | 20.06.2024 | |
| 10 | ಸರ್ಕಾರದ ಹಂತದಲ್ಲಿ ಅನುಮೋದಿಸುವ ಪ್ರಸ್ತಾವನೆಗಳು | 30.06.2024 | ಸರ್ಕಾರದಲ್ಲಿ ಪ್ರಸ್ತಾವನೆಗಳನ್ನು ಅನುಮೋದಿಸಿದಂತೆ UUCMS ನಲ್ಲಿ ಅನುಮೋದಿಸುವುದು. |
| 11 | ಸರ್ಕಾರದ ಹಂತದಲ್ಲಿ ಅನುಮೋದಿಸಿದ ಪ್ರಸ್ತಾವನೆಗಳನ್ನು UUCMS ನಲ್ಲಿ ಸರ್ಕಾರದ ಉಪಕಾರ್ಯದರ್ಶಿ ಅನುಮೋಧನೆ** | 30.06.2024 | |

*ವಿಶ್ವವಿದ್ಯಾಲಯಗಳ ಹಂತದಲ್ಲಿ ಅನುಮೋದನೆಗೊಂಡ ಕೂಡಲೇ, UUCMS ನಲ್ಲಿ ಪ್ರವೇಶಾತಿಗಾಗಿ ಅವಶ್ಯವಿರುವ Intake/ Course/ Combination/Subject ಗಳು ಪ್ರವೇಶಾತಿಯ ಅರ್ಜಿದಾರರಿಗೆ ದಿನಾಂಕ: 17.06.2024ರಿಂದ ಕಾಣಸಿಗುತ್ತವೆ.

**ಸರ್ಕಾರದ ಹಂತದಲ್ಲಿ ಅನುಮೋದನೆಗೊಂಡ ಕಾಲೇಜುಗಳಿಗೆ ದಿನಾಂಕ:30.06.2024ರ ನಂತರ Intake/ Course/ Combination/Subject ಗಳು ಪ್ರವೇಶಾತಿಯ ಅರ್ಜಿದಾರರಿಗೆ ಕಾಣಸಿಗುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Sashi 08/05/24
(ಶಶಿಕಲಾ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1).

**ಇವರಿಗೆ:**

1. ಕುಲಪತಿಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
3. ಕುಲಸಚಿವರುಗಳು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಕರ್ನಾಟಕ.
4. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
6. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಗಾಂಧಿನಗರ, ಬೆಂಗಳೂರು.
7. ಮಾನ್ಯ ರಾಜ್ಯಪಾಲರ ಆಪ್ತ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
8. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.

9. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ(ಕಾಲೇಜು)/(ತಾಂತ್ರಿಕ ಮತ್ತು ಯೋಜನೆ ಶಾಖೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಇ-ಸಮನ್ವಯಾಧಿಕಾರಿ, ಉನ್ನತ ಶಿಕ್ಷಣ ಇಲಾಖೆ, ಇವರಿಗೆ (ಉನ್ನತ ಶಿಕ್ಷಣ ಇಲಾಖೆ ಜಾಲತಾಣದಲ್ಲಿ ಪ್ರಕಟಿಸಲು)
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.